**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಎಸ್‌ಸಿ ಸಂಖ್ಯೆಃ 530/2022**

ಫಿರ್ಯಾದುದಾರರು ಃ ಸರ್ಕಾರದ ಪರವಾಗಿ ಶಂಕರನಾರಾಯಣ ಪೊಲೀಸರು

ವಿರುದ್ಧ

ಆರೋಪಿತರು ಃ ಬಿ. ಜಿ. ಕೃಷ್ಣಮೂರ್ತಿ @ಭಾಸ್ಕರ @ ವಿಜಯ

**ದೋಷಾರೋಪಣೆ**

ಶ್ರೀ ಅಬ್ದುಲ್ ರಹೀಮ್ ಹುಸೇನ್ ಶೇಖ್, ಬಿ.ಎಸ್‌ಸಿ., ಬಿ.ಇಡಿ., ಎಲ್‌ಎಲ್.ಬಿ. (ಸ್ಪೆಷಲ್), ಕುಂದಾಪುರದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶನಾದ ನಾನು

3. ಬಿ.ಜಿ.ಕೃಷ್ಣಮೂರ್ತಿ @ ಭಾಸ್ಕರ @ ವಿಜಯ
ತಂದೆಃ ಗೋಪಾಲ ರಾವ್,
ವಯಸ್ಸುಃ 50 ವರ್ಷ,
ವಾಸಃ ನೆಮ್ಮಾರ್ ಅಂಚೆ,
ಬಗುಡಿಬೈಲ್ ಗ್ರಾಮ,
ಶೃಂಗೇರಿ ತಾಲೂಕು,
ಚಿಕ್ಕಮಗಳೂರು ಜಿಲ್ಲೆ.

ನಿಮ್ಮ – ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ನೀನು ಆರೋಪಿ) ದಿನಾಂಕ 12-01-2005 ರಂದು ಬೆಳಿಗ್ಗೆ 7.15 ಗಂಟೆ ಸುಮಾರಿಗೆ ಕುಂದಾಪುರ ತಾಲೂಕು ಹಳ್ಳಿಹೊಳೆ ಗ್ರಾಮದ ಯಡಗೇರಿ ಎಂಬಲ್ಲಿರುವ ಶೇಷಾಚಲ ಯಡಿಯಾಳ (ಚಾಸಾ-1) ಇವರ ಮನೆಯ ಅಂಗಳಕ್ಕೆ ದೋಷಾರೋಪಣಾ ಪತ್ರದಲ್ಲಿ ನಮೂದಿಸಿದ ಆರೋಪಿತರಾದ 1ನೇ ಆರೋಪಿ ವಿಕ್ರಮ ಗೌಡ @ ಶ್ರೀಕಾಂತ, 2ನೇ ಆರೋಪಿ ಪ್ರದೀಪ @ ಸುರೇಶ, 4ನೇ ಆರೋಪಿ ಹೊರಳೆ ಸರೋಜ @ ಸರಳ, 5ನೇ

ಆರೋಪಿ ದೇವೇಂದ್ರ @ ವಿಷ್ಣು, 6 ನೇ ವಸಂತ @ ಆನಂದ, 7 ನೇ ಆರೋಪಿ ನೀಲಗುಳಿ ಪದ್ಮನಾಭ ರವರೊಂದಿಗೆ ಸೇರಿಕೊಂಡು ಸಮಾನ ಉದ್ದೇಶ ಹೊಂದಿ ಅಕ್ರಮ ಕೂಟ ಸೇರಿ ಕಲಂ 143 ಸಹಕಲಂ 149 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಎರನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ ಸಮಾನ ಉದ್ದೇಶದಿಂದ ಅಕ್ರಮ ಕೂಟ ಸೇರಿ ದೊಂಬಿ ನಡೆಸುವ ಉದ್ದೇಶಂದ ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಬಂದು ಕಲಂ 147 ಸಹಕಲಂ 149 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೂರನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ ಸಮಾನ ಉದ್ದೇಶದಿಂದ ಅಕ್ರಮ ಕೂಟ ಸೇರಿಕೊಂಡು ದೊಂಬಿಯನ್ನುಂಟು ಮಾಡುವ ಉದ್ದೇಶದಿಂದ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಬಂದು ಕಲಂ 148 ಸಹಕಲಂ 149 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ ಸಮಾನ ಉದ್ದೇಶದಿಂದ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡಿ ಕಲಂ 447 ಸಹಕಲಂ 149 ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಐದನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ

ಸಮಾನ ಉದ್ದೇಶದಿಂದ ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಅಕ್ರಮ ಪ್ರವೇಶ ಮಾಡಿ ಚಾಸಾ-1 ನೇಯವರಿಗೆ ಜೀವಬೆದರಿಕೆಯನ್ನು ಹಾಕಿ ಕಲಂ 506 ಸಹಕಲಂ 149 ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಆರನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ ಸಮಾನ ಉದ್ದೇಶದಿಂದ ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಅಕ್ರಮ ಪ್ರವೇಶ ಮಾಡಿ ಚಾಸಾ-1 ನೇಯವರಿಗೆ ಜೀವಬೆದರಿಕೆಯನ್ನು ಹಾಕಿದ್ದಲ್ಲದೇ ಅಪರಾಧವನ್ನು ಮಾಡಲು ಒಳ ಸಂಚು ಮಾಡಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಅಪರಾಧಿಕ ಬಲಪ್ರಯೋಗ/ಅಪರಾಧಿಕ ಬಲದ ಪ್ರದರ್ಶನದ ಮೂಲಕ ಭಯ ಹುಟ್ಟಿಸಲು ಒಳಸಂಚು ಮಾಡಿ ಭಾರತ ಸರಕಾರದ ವಿರುದ್ಧ ಯುದ್ಧ ಹೂಡಲು ಪ್ರಯತ್ನ ಮಾಡಿ ಕಲಂ 121(ಎ) ಸಹಕಲಂ 149 ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಏಳನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ ಸಮಾನ ಉದ್ದೇಶದಿಂದ ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಅಕ್ರಮ ಪ್ರವೇಶ ಮಾಡಿ ಚಾಸಾ-1 ನೇಯವರಿಗೆ ಜೀವಬೆದರಿಕೆಯನ್ನು ಹಾಕಿದ್ದಲ್ಲದೇ ಸಿಪಿಎಂ (ಮಾವೋವಾದಿ) ನಕ್ಸಲೈಟ್ ಎಂಬ ಸರ್ಕಾರದ ನಿಷೇಧಿತ ಸಂಘಟನೆಯೊಂದಿಗೆ ಸೇರಿಕೊಂಡು ಕಲಂ 3 ಸಹಕಲಂ 10 ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಎಂಟನೇಯದಾಗಿ ಏಳನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ, ಸಮಯದಲ್ಲಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6,

7 ನೇಯವರೊಂದಿಗೆ  ಸಮಾನ ಉದ್ದೇಶದಿಂದ ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಅಕ್ರಮ ಪ್ರವೇಶ ಮಾಡಿ ಚಾಸಾ-1 ನೇಯವರಿಗೆ ಜೀವಬೆದರಿಕೆಯನ್ನು ಹಾಕಿದ್ದಲ್ಲದೇ ಸಿಪಿಎಂ (ಮಾವೋವಾದಿ) ನಕ್ಸಲೈಟ್ ಎಂಬ ಸರ್ಕಾರದ ನಿಷೇಧಿತ ಸಂಘಟನೆಯೊಂದಿಗೆ ಸೇರಿಕೊಂಡು ಕಲಂ 3 ಸಹಕಲಂ 13 ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಕೊನೆಯದಾಗಿ ನೀನು (ಆರೋಪಿ) ಮೇಲೆ ಹೇಳಿದ ಇತರೇ ಆರೋಪಿತರಾದ 1, 2, 4, 5, 6, 7 ನೇಯವರೊಂದಿಗೆ  ಸಮಾನ ಉದ್ದೇಶದಿಂದ ಚಾಸಾ-1 ನೇಯವರ ಮನೆಯ ಅಂಗಳಕ್ಕೆ ಮಾರಕಾಸ್ತ್ರವಾದ ಬಂದೂಕನ್ನು ಹಿಡಿದುಕೊಂಡು ಅಕ್ರಮ ಪ್ರವೇಶ ಮಾಡಿ ಚಾಸಾ-1 ನೇಯವರಿಗೆ ಜೀವಬೆದರಿಕೆಯನ್ನು ಹಾಕಿದ್ದಲ್ಲದೇ ಸಿಪಿಎಂ (ಮಾವೋವಾದಿ) ನಕ್ಸಲೈಟ್ ಎಂಬ ಸರ್ಕಾರದ ನಿಷೇಧಿತ ನಕ್ಸಲ್ ಸಂಘಟನೆಯೊಂದಿಗೆ  ಸೇರಿಕೊಂಡು ಸರ್ಕಾರದ ವಿರುದ್ಧ ದ್ವೇಷ ಹಾಗೂ ತಿರಸ್ಕಾರವನ್ನುಂಟು ಮಾಡುವ ಉದ್ದೇಶ ಹೊಂದಿ ಸರ್ಕಾರದ ಅನುಮತಿಯನ್ನು ಪಡೆಯದೇ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿ ಕಾನೂನುಬಾಹಿರ ಕೃತ್ಯವೆಸಗಿ ಕಲಂ 3 ಸಹಕಲಂ 25 ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ 1959 ರನ್ವಯ ಅಪರಾಧವೆಸಗಿರುತ್ತೀ.

ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ವಿಚಾರಣೆಗೆ ಒಳಪಡಿಸಲು ಆದೇಶಿಸುತ್ತೇನೆ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರವನ್ನು ದೃಢೀಕರಿಸಲಾಗಿದೆ.**

**ದಿನಾಂಕಃ 17-07-2025** **ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಕುಂದಾಪುರ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಎಸ್‌ಸಿ ಸಂಖ್ಯೆಃ 530/2022**

**ಫಿರ್ಯಾದುದಾರರು** ಃ ಸರ್ಕಾರದ ಪರವಾಗಿ ಶಂಕರನಾರಾಯಣ ಪೊಲೀಸರು

**ವಿರುದ್ಧ**

**ಆರೋಪಿ** ಃ **3.** ಬಿ.ಜಿ.ಕೃಷ್ಣಮೂರ್ತಿ *@* ಭಾಸ್ಕರ *@* ವಿಜಯ
ತಂದೆಃ ಗೋಪಾಲ ರಾವ್,
ವಯಸ್ಸುಃ **50** ವರ್ಷ,
ವಾಸಃ ನೆಮ್ಮಾರ್ ಅಂಚೆ,
ಬಗುಡಿಬೈಲ್ ಗ್ರಾಮ,
ಶೃಂಗೇರಿ ತಾಲೂಕು,
ಚಿಕ್ಕಮಗಳೂರು ಜಿಲ್ಲೆ.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ನೀವು ಕೇಳಿದ್ದೀರಾ?

ಉತ್ತರಃ Yes

**ಪ್ರಶ್ನೆ 2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

**ಉತ್ತರಃ** Claimed to be tried.

ದಿನಾಂಕಃ**17-07-2025**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕುಂದಾಪುರ**